ದಿನಾಂಕ: 17-04-2018 ರಂದು ಮೆ॥ಗ್ರಾಸಿಂ ಇಂಡಸ್ಟ್ರೀಸ್ ಲಿಮಿಟೆಡ್ ಇವರು ಪಲ್ಪ್ ಉತ್ಪಾದನಾ ಘಟಕ, ವಿ.ಎಸ್.ಎಫ್. ಉತ್ಪಾದನಾ ಘಟಕ, ಸಲ್ಫೂರಿಕ್ ಆಸಿಡ್ ಪ್ಲಾಂಟ್, ಕಾರ್ಬನ್ ಡೈ ಸಲ್ಫೈಡ್ ಉತ್ಪಾದನಾ ಘಟಕ, ಸಹ-ವಿದ್ಯುತ್ ಉತ್ಪಾದನಾ ಘಟಕದ ಸಾಮರ್ಥ್ಯ ಹೆಚ್ಚಳ ಮಾಡಲು ಮತ್ತು ನೂತನ ಎಕ್ಸೆಲ್ ಫೈಬರ್ ಉತ್ಪಾದನಾ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುವ ಬಗ್ಗೆ ನಡೆದ ಪರಿಸರ ಸಾರ್ವಜನಿಕ ಸಭೆಯ ನಡಾವಳಿಗಳು.

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : **ಬಾಳೆಹಳ್ಳಿ ವೀರಸಿಂಹಾಸನ ಮಂಗಳ ಮಂಟಪ, ಕೋಡಿಯಾಲ ಹೊಸಪೇಟೆ, ಕುಮಾರಪಟ್ಟಣಂ ಗ್ರಾಮ, ರಾಣೇಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ.** |
| ದಿನಾಂಕ | : 17-04-2018. |
| ಅಧ್ಯಕ್ಷತೆ | : ಡಾ. ಎಂ.ವಿ. ವೆಂಕಟೇಶ್, ಭಾ.ಆ.ಸೇ.<br>ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,<br>ಜಿಲ್ಲಾ ಪರಿಸರ ಸಾರ್ವಜನಿಕ ಸಭೆ ಸಮಿತಿ,<br>ಹಾವೇರಿ ಜಿಲ್ಲೆ. |
| ಹಾಜರಿದ್ದ ಅಧಿಕಾರಿಗಳ ವಿವರ | : **ಅನುಬಂಧ-1** |
| ಯೋಜನಾದಾರರ ವತಿಯಿಂದ ಹಾಜರಿದ್ದ ಪ್ರತಿನಿಧಿಗಳ ವಿವರ | : **ಅನುಬಂಧ-2** |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : **ಅನುಬಂಧ-3** |
| ಸಾರ್ವಜನಿಕರು ಲಿಖಿತ ರೂಪದಲ್ಲಿ ಸಲ್ಲಿಸಿದ (739 ನಂ.) ಅಭಿಪ್ರಾಯಗಳ ಪತ್ರಗಳು | : **ಅನುಬಂಧ-4** |
| ಸಾರ್ವಜನಿಕರು ಪ್ರಸ್ತಾಪಿಸಿದ ಸಮಸ್ಯೆಗಳ ಪಟ್ಟಿ ಮತ್ತು ಯೋಜನಾದಾರರು ನೀಡಿದ ಹೇಳಿಕೆಗಳ ಸಾರಾಂಶ(ಕನ್ನಡ) | : **ಅನುಬಂಧ-5** |

**ಪೀಠಿಕೆ:-**

ಮೆ॥ಗ್ರಾಸಿಂ ಇಂಡಸ್ಟ್ರೀಸ್ ಲಿಮಿಟೆಡ್, ಕುಮಾರಪಟ್ಟಣಂ, ರಾಣೇಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರು ಪಲ್ಪ್ ಉತ್ಪಾದನಾ ಘಟಕ (74,400 ಟಿ.ಪಿ.ಎ ರಿಂದ 1,48,800 ಟಿ.ಪಿ.ಎ), ವಿ.ಎಸ್.ಎಫ್. ಉತ್ಪಾದನಾ ಘಟಕ (87,600 ಟಿ.ಪಿ.ಎ ರಿಂದ 1,75,200 ಟಿ.ಪಿ.ಎ), ಸಲ್ಫೂರಿಕ್ ಆಸಿಡ್ ಉತ್ಪಾದನಾ ಘಟಕ (75,110 ಟಿ.ಪಿ.ಎ ರಿಂದ 1,50,220 ಟಿ.ಪಿ.ಎ) ಕಾರ್ಬನ್ ಡೈ ಸಲ್ಫೈಡ್ ಉತ್ಪಾದನಾ ಘಟಕ (14,365 ಟಿ.ಪಿ.ಎ ರಿಂದ 28,730 ಟಿ.ಪಿ.ಎ), ಸಹ-ವಿದ್ಯುತ್ ಉತ್ಪಾದನಾ ಘಟಕದ ಸಾಮರ್ಥ್ಯ (20 ಮೆ.ವ್ಯಾ. ನಿಂದ 50 ಮೆ.ವ್ಯಾ.) ಹೆಚ್ಚಳ ಮಾಡಲು ಮತ್ತು ನೂತನ ಎಕ್ಸೆಲ್ ಫೈಬರ್ (36,500 ಟಿ.ಪಿ.ಎ) ಉತ್ಪಾದನಾ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ.

ಪರಿಸರ ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯ, ಭಾರತ ಸರ್ಕಾರ ಇವರು ದಿನಾಂಕ: 14.09.2006 ರಂದು ಹೊರಡಿಸಿರುವ ಪರಿಸರ ಅಘಾತ ಅಂದಾಜೀಕರಣ ಅಧಿಸೂಚನೆ ಪ್ರಕಾರ ಸದರಿ ಯೋಜನೆಗೆ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಅದರಂತೆ, ನಿರ್ದೇಶಕರು ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯ, ಭಾರತ ಸರ್ಕಾರ ಇವರು ಸದರಿ ಯೋಜನೆಗೆ Terms of References (ಟಿ.ಓ.ಅರ್) ಅಂತಿಮಗೊಳಿಸಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆ ನಡೆಸಲು ಕೋರುವಂತೆ ಯೋಜನಾದಾರರಿಗೆ ತಿಳಿಸಿರುತ್ತಾರೆ. ಅದರಂತೆ ಈ ಯೋಜನೆಗೆ 'ಕರಡು ಪರಿಸರ' ಅಘಾತ ಅಂದಾಜೀಕರಣ ವರದಿಯನ್ನು ಮತ್ತು ಇದರ ಕನ್ನಡ ಮತ್ತು ಇಂಗ್ಲೀಷ್ ಅವತರಣಿಕೆಯ ಸಂಕ್ಷಿಪ್ತ ವರದಿಯನ್ನು ಮಂಡಳಿಗೆ ಸಲ್ಲಿಸಿ ಕೇಂದ್ರ ಸರ್ಕಾರದ ಪರಿಸರ ಅಘಾತ ಅಧ್ಯಯನ ಅಧಿಸೂಚನೆ-2006ರ ಪ್ರಕಾರ ಪರಿಸರ ಸಾರ್ವಜನಿಕ

ಸಭೆಯನ್ನು ನಡೆಸುವಂತೆ ಮೆ॥ಗ್ರಾಸಿಂ ಇಂಡಸ್ಟ್ರೀಸ್ ಲಿಮಿಟೆಡ್, ಕುಮಾರಪಟ್ಟಣಂ, ರಾಣೇಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರು ಕೋರಿಕೊಂಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಯೋಜನೆಗೆ ಸಂಬಂದಪಟ್ಟಂತೆ ಪರಿಸರ ಸಾರ್ವಜನಿಕ ಸಭೆಯನ್ನು **ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲ್ಲೂಕು, ಕೋಡಿಯಾಲ ಹೊಸಪೇಟೆ, ಕುಮಾರಪಟ್ಟಣಂ ಗ್ರಾಮದ ಬಾಳೆಹಳ್ಳಿ ವೀರಸಿಂಹಾಸನ ಮಂಗಳ ಮಂಟಪದಲ್ಲಿ ದಿನಾಂಕ:17-04-2018 ರಂದು ಬೆಳಗ್ಗೆ 11:00 ಘಂಟೆಗೆ** ನಿಗದಿಪಡಿಸಲಾಗಿತ್ತು.

ಮೆ॥ಗ್ರಾಸಿಂ ಇಂಡಸ್ಟ್ರೀಸ್ ಲಿಮಿಟೆಡ್, ಕುಮಾರಪಟ್ಟಣಂ, ರಾಣೇಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರು ಪಲ್ಪ್ ಉತ್ಪಾದನಾ ಘಟಕ, ವಿ.ಎಸ್.ಎಫ್. ಉತ್ಪಾದನಾ ಘಟಕ, ಕಾರ್ಬನ್ ಡೈ ಸಲ್ಫೈಡ್ ಉತ್ಪಾದನಾ ಘಟಕ, ಸಹ-ವಿದ್ಯುತ್ ಉತ್ಪಾದನಾ ಘಟಕದ ಸಾಮರ್ಥ್ಯ ಹೆಚ್ಚಳ ಮಾಡಲು ಮತ್ತು ನೂತನ ಎಕ್ಸೆಲ್ ಫೈಬರ್ ಉತ್ಪಾದನಾ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುವ ಯೋಜನೆಗೆ ಕುರಿತಂತೆ **ದಿನಾಂಕ:** 17-04-2018 **ರಂದು** ಬೆಳಿಗ್ಗೆ 11:00 ಘಂಟೆಗೆ ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲ್ಲೂಕು, ಕೋಡಿಯಾಲ ಹೊಸಪೇಟೆ, ಕುಮಾರಪಟ್ಟಣಂ ಗ್ರಾಮದ ಬಾಳೆಹಳ್ಳಿ ವೀರಸಿಂಹಾಸನ ಮಂಗಲ ಮಂಟಪದಲ್ಲಿ ಪರಿಸರ ಸಾರ್ವಜನಿಕ ಸಭೆ ನಡೆಸಲು ಉದ್ದೇಶಿಸಲಾಯಿತು.

ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಪರಿಸರ ಸಾರ್ವಜನಿಕ ಸಭೆಯ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಇಂಗ್ಲೀಷ್ ಪತ್ರಿಕೆಯಾದ **"ಡೆಕ್ಕನ್ ಹೆರಾಲ್ಡ್"** ಮತ್ತು ಕನ್ನಡ ಪತ್ರಿಕೆಯಾದ **"ವಿಜಯ ಕರ್ನಾಟಕ"** ದಿನ ಪತ್ರಿಕೆಗಳಲ್ಲಿ ದಿನಾಂಕ: 17-03-2018 ರಂದು ನೀಡಲಾಗಿರುತ್ತದೆ. ಅಲ್ಲದೇ ಸ್ಥಳೀಯರ ಮಾಹಿತಿಗಾಗಿ ಸ್ಥಳೀಯ ಕನ್ನಡ ದಿನ ಪತ್ರಿಕೆ ಯಾದ **"ಜನತಾವಾಣಿ"**ಯಲ್ಲೂ ಸಹ ದಿನಾಂಕ:17-03-2018 ಹಾಗೂ **"ಕೌರವ"** ಪತ್ರಿಕೆಯಲ್ಲಿ ದಿನಾಂಕ:18-03-2018ರಂದು ಪತ್ರಿಕಾ ಪ್ರಕಟಣೆ ನೀಡಲಾಗಿರುತ್ತದೆ. ಪತ್ರಿಕಾ ಪ್ರಕಟಣೆಯಲ್ಲಿ, ಯೋಜನಾ ಸ್ಥಳದಲ್ಲಿ ವಾಸವಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆ, ಅಭಿಪ್ರಾಯ, ಟೀಕೆ-ಟಿಪ್ಪಣಿ ಹಾಗೂ ಅಹವಾಲುಗಳನ್ನು ಮೌಖಿಕವಾಗಿ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಭೆ ಸಮಿತಿ (ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ) ಇವರಿಗೆ, ಅಧಿಸೂಚನೆ ಪ್ರಕಟವಾದ 30 ದಿನಗಳೊಳಗೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ಯೋಜನೆಯ ಪರಿಸರ ಅಘಾತ ಅಂದಾಜೀಕರಣ ವರದಿ ಹಾಗೂ ಕಾರ್ಯಕಾರಿ ಸಾರಾಂಶಗಳ ವರದಿಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ ಜಿಲ್ಲಾಧಿಕಾರಿಗಳ ಕಛೇರಿ, ಹಾವೇರಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಹಾವೇರಿ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಹಾವೇರಿ, ಗ್ರಾಮ ಪಂಚಾಯತ್ ಕಾರ್ಯಾಲಯ, ಕೋಡಿಯಾಲ ಹೊಸಪೇಟೆ ಗ್ರಾಮ, ರಾಣೇಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಹಾವೇರಿ ಮತ್ತು ದಾವಣಗೆರೆ, ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯ, (ದಕ್ಷಿಣ ವಲಯ ಕಛೇರಿ), ಬೆಂಗಳೂರು ಹಾಗೂ ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೇಂದ್ರ ಕಛೇರಿ, ಬೆಂಗಳೂರು ಈ ಸ್ಥಳಗಳಲ್ಲಿ ಇಡಲಾಗಿತ್ತು.

**ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಪರಿಸರ ಸಾರ್ವಜನಿಕ ಸಭೆಯಲ್ಲಿ ಸಲ್ಲಿಸಿರುತ್ತಾರೆ. (ಅನುಬಂಧ-5 ರಲ್ಲಿ ಲಗತ್ತಿಸಲಾಗಿದೆ.)**

**ದಿನಾಂಕ:** 17-04-2018 **ರಂದು** ಬೆಳಿಗ್ಗೆ 11:00 ಘಂಟೆಗೆ ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲ್ಲೂಕು, ಕೋಡಿಯಾಲ ಹೊಸಪೇಟೆ, ಕುಮಾರಪಟ್ಟಣಂ ಗ್ರಾಮದ ಬಾಳೆಹಳ್ಳಿ ವೀರಸಿಂಹಾಸನ ಮಂಗಲ ಮಂಟಪದಲ್ಲಿ ಪರಿಸರ ಸಾರ್ವಜನಿಕ ಸಭೆ ನಡೆಸಲಾಯಿತು. ಶ್ರೀ ಕೆ.ಬಿ. ಕೊಟ್ರೇಶ್, ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ದಾವಣಗೆರೆ ಇವರು ಡಾ.ಎಂ.ವಿ.ವೆಂಕಟೇಶ್,ಭಾ.ಆ.ಸೇ., ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ, ಶ್ರೀ ಪರಶುರಾಮ್, ಜಿಲ್ಲಾ ಪೋಲಿಸ್ ಅಧೀಕ್ಷಕರು, ಹಾವೇರಿ, ಶ್ರೀ ಸಿ.ಡಿ.ಕುಮಾರ್, ಹಿರಿಯ ಪರಿಸರ ಅಧಿಕಾರಿಗಳು, ವಿಭಾಗೀಯ ಕಛೇರಿ,

ಚಿತ್ರದುರ್ಗ, ಕಂಪನಿಯ ಪ್ರತಿನಿಧಿಗಳು ಹಾಗೂ ಸ್ಥಳದಲ್ಲಿ ಹಾಜರಿದ್ದ ಎಲ್ಲಾ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸುತ್ತಾ, ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯರವರ ಪರಿಸರ ಅಘಾತ ಅಧಿಸೂಚನೆ 2006 ರನ್ವಯ, ಸದರಿ ಪರಿಸರ ಸಾರ್ವಜನಿಕ ಸಭೆ ನಡೆಸಲು ತೆಗೆದುಕೊಂಡ ಕ್ರಮವನ್ನು ವಿವರಿಸಿದರು ಮತ್ತು ಉದ್ದೇಶಿತ ಪ್ರಸ್ತಾವನೆಯ ಪರಿಸರ ಅಘಾತ ಅಧಿಸೂಚನೆ 2006 ರ ವ್ಯಾಪ್ತಿಯಲ್ಲಿ ಸೇರಿರುವುದರಿಂದ ಪರಿಸರ ಸಾರ್ವಜನಿಕ ಸಭೆ ನಡೆಸಬೇಕಾಗಿರುವ ಕುರಿತು ನೆರೆದಿದ್ದ ಸಾರ್ವಜನಿಕರಿಗೆ ಸಭೆಯ ಉದ್ದೇಶವನ್ನು ವಿವರಿಸಿ, ಸಭೆಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳಿಗೆ ಸದರಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು. ಅದರಂತೆ, **ಡಾ.ಎಂ.ವಿ.ವೆಂಕಟೇಶ್,ಭಾ.ಆ.ಸೇ. ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ** ಇವರು ಸಭೆಯ ಮಹತ್ವವನ್ನು ತಿಳಿಸಿ ಮೆ॥ಗ್ರಾಸಿಂ ಇಂಡಸ್ಟ್ರೀಸ್ ಲಿಮಿಟೆಡ್‌ನ ಪ್ರತಿನಿಧಿಯವರಿಗೆ ಯೋಜನೆಯ ಬಗ್ಗೆ ಪ್ರಸ್ಥಾವನೆ ಮಂಡಿಸಲು ನಿರ್ದೇಶಿಸಿದರು ಮತ್ತು ಯೋಜನೆಯ ಬಗ್ಗೆ ಅಭಿಪ್ರಾಯಗಳು, ಆಕ್ಷೇಪಗಳು ಇದ್ದಲ್ಲಿ ಕಂಪನಿಯ ಪ್ರತಿನಿಧಿಗಳು ಉದ್ದೇಶಿತ ವಿಸ್ತರಣಾ ಯೋಜನೆಯನ್ನು ಪ್ರಸ್ತುತಪಡಿಸಿದ ನಂತರ ತಿಳಿಸಲು ಸಾರ್ವಜನಿಕರಿಗೆ ಸೂಚಿಸಿದರು.

**ಮೆ॥ಗ್ರಾಸಿಂ ಇಂಡಸ್ಟ್ರೀಸ್ ಲಿಮಿಟೆಡ್‌ನ ಪರವಾಗಿ ಡಾ.ರಾಜೇಶ್ ಭಟ್, ಡೆಪ್ಯೂಟಿ ಜನರಲ್ ಮೇನೇಜರ್ ಇವರು** 25ನೇ ಆಗಸ್ಟ್ 1947ರಂದು ಸಂಯೋಜಿತವಾದ ಮೆ॥ಗ್ರಾಸಿಂ ಇಂಡಸ್ಟ್ರೀಸ್ ಲಿಮಿಟೆಡ್ (ಜಿ.ಐ.ಎಲ್) ಇದು ಆದಿತ್ಯ ಬಿರ್ಲಾ ಸಮೂಹದ ಮುಂಚೂಣಿ ಸಂಸ್ಥೆ. ಮೆ॥ಜಿ.ಐ.ಎಲ್ ಇದು ಭಾರತದ ನಾಗ್ಡಾ (ಮಧ್ಯಪ್ರದೇಶ), ಹರಿಹರ (ಕರ್ನಾಟಕ), ಖರಚ್ ಮತ್ತು ವಿಲಾಯತ್ (ಗುಜರಾತ್) ಗಳಲ್ಲಿ ನಾಲ್ಕು ವಿ.ಎಸ್.ಎಫ್. ಕಾರ್ಖಾನೆಗಳನ್ನು ಹೊಂದಿದೆ. ಹರಿಹರ ಘಟಕದಲ್ಲಿ ಹರಿಹರ ಪಾಲಿಫೈಬರ್ಸ್ ವಿಭಾಗ (ಹೆಚ್.ಪಿ.ಎಫ್) ಮತ್ತು ಗ್ರಾಸಲಿನ್ ವಿಭಾಗ (ಜಿ.ಆರ್.ಡಿ) ಎಂಬ ಎರಡು ವಿಭಾಗಗಳಿವೆ. ಕ್ಲೋರಿನ್ ಬಳಕೆಯನ್ನು ಕಡಿಮೆ ಮಾಡಿ, ಸುಧಾರಿತ ಆಕ್ಸಿಜನ್ ಬ್ಲೀಚಿಂಗ್ ವಿದಾನವನ್ನು ಅಳವಡಿಸಿ ಕಂಪನಿಯು ಸ್ಥಾಪಿಸಿದ ರೇಯಾನ್ ಗ್ರೇಡ್ ಪ್ಲಾಂಟ್, ಸಂಪೂರ್ಣವಾಗಿ ದೇಶೀಯ ಮರಗಳ ಸಂಪನ್ಮೂಲ ಮತ್ತು ದೇಶೀಯ ತಾಂತ್ರಿಕತೆ ಬಳಸಿ ಸ್ಥಾಪಿಸಿದ ಮೊಟ್ಟಮೊದಲ ಕಾರ್ಖಾನೆಯಾಗಿದೆ. ಪಾಲಿಫೈಬರ್ಸ್ ಡಿವಿಜನ್ (ಪಲ್ಪ್ ಪ್ಲಾಂಟ್) 1971ರಲ್ಲಿ ಸ್ಥಾಪಿತವಾಯಿತು. ಸದ್ಯದ ಪಲ್ಪ್ ಉತ್ಪಾದನಾ ಸಾಮರ್ಥ್ಯವು ತಿಂಗಳಿಗೆ 6200 ಮೆಟ್ರಿಕ್ ಟನ್ ಇರುತ್ತದೆ. ಗ್ರಾಸಲೀನ್ ವಿಭಾಗವು (ವಿಸ್ಕೋಸ್ ಸ್ಟಾಪಲ್ ಫೈಬರ್ ಪ್ಲಾಂಟ್) 1977 ರಲ್ಲಿ ವಿ.ಎಸ್.ಎಫ್. (14,600 ಟನ್ ವರ್ಷಕ್ಕೆ) ಮತ್ತು ಕ್ಯಾಪ್ಟಿವ್ ಪವರ್ ಪ್ಲಾಂಟ್ (ಸಿ.ಪಿ.ಪಿ.) (2.2 ಮೆ.ವಾ) ಸಾಮರ್ಥ್ಯದೊಂದಿಗೆ ಸ್ಥಾಪಿತವಾಯಿತು. ಸದ್ಯದ ಉತ್ಪಾದನಾ ಸಾಮರ್ಥ್ಯವು ವಿ.ಎಸ್.ಎಫ್. 87,600 ಟಿ.ಪಿ.ಎ., ಸಲ್ಫೂರಿಕ್ ಆಸಿಡ್ 75,110 ಟಿ.ಪಿ.ಎ., ಕಾರ್ಬನ್ ಡೈಸಲ್ಫೈಡ್‌ದ 14,365 ಟಿ.ಪಿ.ಎ., ಸೋಡಿಯಂ ಸಲ್ಫೇಟ್ 69,205 ಟಿ.ಪಿ.ಎ. ಮತ್ತು ಸಿ.ಪಿ.ಪಿ. 20 ಮೆ.ವಾ. 2010-15ರ ಅವಧಿಯಲ್ಲಿ ವಿ.ಎಸ್.ಎಫ್.ನ ಬಳಕೆ ಜಾಗತಿಕವಾಗಿ 11% CAGR ನ ಗತಿಯಲ್ಲಿ ಏರಿಕೆಯನ್ನು ಕಂಡಿದೆ ಮತ್ತು ಇದೇ ಪ್ರಮಾಣದಲ್ಲಿ ಮುಂದುವರೆಯುವುದೆಂದು ನಿರೀಕ್ಷಿಸಲಾಗಿದೆ. 2015-2020ರ ಅವಧಿಯಲ್ಲಿ ಭಾರತದಲ್ಲಿ ಸಹ ವಿ.ಎಸ್.ಎಫ್. ಬೇಡಿಕೆ 11% ಗತಿಯಲ್ಲಿ ಏರಿಕೆಯಾಗುವುದೆಂದು ನಿರೀಕ್ಷಿಸಲಾಗಿದೆ. ಮಾನನೀಯ ಪ್ರಧಾನ ಮಂತ್ರಿಯವರು ಜವಳಿ ಮತ್ತು ಸಿದ್ಧ ಉಡುಪು ಕ್ಷೇತ್ರಕ್ಕೆ ನಿಗದಿಪಡಿಸಿದ ದೂರದೃಷ್ಟಿಯನ್ನು ಸಾಕಾರಗೊಳಿಸಲು, ಹತ್ತಿಯನ್ನು ಪೂರ್ಣ ಪ್ರಮಾಣದಲ್ಲಿ ಬೆಳೆಯಲು ಭೂಮಿ ದುರ್ಲಬವಿರುವುದರಿಂದ ಹತ್ತಿಗೆ ಪರ್ಯಾಯವಾದ ಕಚ್ಛಾ ವಸ್ತುಗಳ ಅಗತ್ಯ ಇರುತ್ತದೆ. ಆದ್ದರಿಂದ ಜವಳಿ ಕ್ಷೇತ್ರಕ್ಕೆ ಅಗತ್ಯವಾದ ಫೈಬರ್ ಬೇಡಿಕೆಯನ್ನು ಎಮ್.ಎಮ್.ಎಫ್ ಮತ್ತು ವಿ.ಎಸ್.ಎಫ್.ಗಳು ಪೂರೈಸಬೇಕಿದೆ. ಬಳಕೆದಾರರ ಹಿತಾನುಭವ, ಪ್ಯಾಶನ್ ಮತ್ತು ಕೌಶಲ್ಯಗಳನ್ನು ಬಯಸುವುದರಿಂದ ವಿ.ಎಸ್.ಎಫ್. ಇದು ಆಯ್ಕೆಯ ಫೈಬರ್ ಆಗಿ ಹೊರಹೊಮ್ಮುತ್ತಿದೆ. ಈ ಸನ್ನಿವೇಶವು ಭಾರತದ ಜವಳಿ ಉದ್ಯಮಗಳಿಗೆ ಬೆಳವಣಿಗೆ ಮತ್ತು ಅಂತರಾಷ್ಟ್ರೀಯ ಉತ್ಪನ್ನಗಳ (ಮಾರುಕಟ್ಟೆಗೆ) ಪೂರೈಕೆಯ ಅವಕಾಶವನ್ನು ನೀಡುತ್ತಿದೆ. ಸದ್ಯ ಘಟಕವು ದಕ್ಷಿಣ ಭಾರತದ ಮಾರುಕಟ್ಟೆ ಅಗತ್ಯವನ್ನು ಪೂರೈಸುತ್ತಿದೆ. ಹೆಚ್ಚುತ್ತಿರುವ ಬೇಡಿಕೆಯನ್ನು ಘಟಕವು ಪೂರೈಸಲು ಸಾಧ್ಯವಾಗದೇ ಹೋದರೆ, ಆಗ ವಿ.ಎಸ್.ಎಫ್.ನ್ನು ಉತ್ತರ ಭಾರತ ಅಥವಾ ವಿದೇಶಗಳಿಂದ ತರಿಸಬೇಕಾಗಿ ಬಂದು, ಇದು ಸಾಗಣೆ ಹಾಗೂ ಇಂಧನದ ಬಳಕೆಯನ್ನು ಹೆಚ್ಚಿಸಿ ವಾತಾವರಣದ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟುಮಾಡುತ್ತದೆ. ಆದ್ದರಿಂದ ವಿ.ಎಸ್.ಎಫ್. ಉತ್ಪಾದನೆಯನ್ನು ಹೆಚ್ಚಿಸುವುದರಿಂದ ಒಟ್ಟಾರೆ ಸಾಗಾಣಿಕೆಗಾಗಿ ಬಳಸುವ ಇಂಧನ ಮತ್ತು ವರ್ಧಿತ ಕಾರ್ಬನ್ ಹೊರೆ ಕಡಿಮೆಯಾಗುತ್ತದೆ. ವಿ.ಎಸ್.ಎಫ್. ಪ್ಲಾಂಟ್‌ಗೆ ಬೇಕಾದ ಹೆಚ್ಚಿನ ಪಲ್ಪ್

ಪೂರೈಕೆಯನ್ನು ಸರಿದೂಗಿಸಲು ಪಲ್ಪ್ ವಿಭಾಗದ ಸಾಮರ್ಥ್ಯ ಹೆಚ್ಚಳವನ್ನು ಯೋಜಿಸಲಾಗಿದೆ. ಇದಿಲ್ಲದೇ ಹೋದರೆ ಪಲ್ಪ್‌ನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಕಂಪನಿಯು ಪಲ್ಪ್ ವಿಭಾಗ, ವಿ.ಎಸ್.ಎಫ್. ವಿಭಾಗ, ಸಲ್ಫೋರಿಕ್ ಆಸಿಡ್ ವಿಭಾಗ, ಕಾರ್ಬನ್ ಡೈಸಲ್ಫೈಡ್ ವಿಭಾಗ, ಕ್ಯಾಪ್ಟಿವ್ ಪವರ್ ಪ್ಲಾಂಟ್ ವಿಭಾಗಗಳ ಸಾಮರ್ಥ್ಯ ಹೆಚ್ಚಳವನ್ನು ಮತ್ತು ಹೊಸ ಎಕ್ಸೆಲ್ ಫೈಬರ್ ಘಟಕವನ್ನು ಕುಮಾರಪಟ್ಟಣಂ ಗ್ರಾಮ, ರಾಣೇಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ, ಕರ್ನಾಟಕ ಇಲ್ಲಿ ಸಾಕಾರಗೊಳಿಸಲು ಯೋಜಿಸಿದೆ ಎಂದು ಸಭೆಯಲ್ಲಿ ವಿವರಿಸಿದರು.

**ಕಂಪನಿಯ ಪ್ರತಿನಿಧಿಗಳು ಉದ್ದೇಶಿತ ವಿಸ್ತರಣಾ ಯೋಜನೆಯನ್ನು ಪ್ರಸ್ತುತಪಡಿಸಿದ ನಂತರ ಈ ಕೆಳಕಂಡಂತೆ ಸಾರ್ವಜನಿಕರು ತಮ್ಮ ಅಭಿಪ್ರಾಯ ಮತ್ತು ಅನಿಸಿಕೆಗಳನ್ನು ವ್ಯಕ್ತಪಡಿಸಿದರು.**

(1) ಶ್ರೀ ಅಥಣಿ ವೀರಣ್ಣ, ದಾವಣಗೆರೆ ನಿವಾಸಿ.

ಇವರು ಸಭೆಯಲ್ಲಿ ಮಾತನಾಡುತ್ತಾ, ಈ ವಿಸ್ತರಣಾ ಯೋಜನೆಯನ್ನು ಸ್ವಾಗತಿಸುತ್ತಾ, ಸದರಿ ವಿಸ್ತರಣಾ ಯೋಜನೆಯಿಂದ ಉದ್ಯೋಗ ಅವಕಾಶ ಹೆಚ್ಚುತ್ತದೆ, ಸುತ್ತುಮುತ್ತಲಿನ ಜನರ ಹಣಕಾಸಿನ ಪರಿಸ್ಥಿತಿ ಸುಧಾರಿಸುತ್ತದೆ, ಮತ್ತು ರಾಜ್ಯದ ಆದಾಯ ಹೆಚ್ಚಾಗುತ್ತದೆ ಎಂದು ತಿಳಿಸಿದರು. ಆದ್ದರಿಂದ, ಈ ಒಂದು ವಿಸ್ತರಣಾ ಯೋಜನೆಗೆ ನಮ್ಮ ಬೆಂಬಲವಿದೆ ಎಂದು ತಿಳಿಸಿದರು.

(2) ಫ಼ಾದರ್ ಆಂತೋನಿ ಪೀಟರ್, ಹರಿಹರ ನಿವಾಸಿ.

ಇವರು ಉದ್ದೇಶಿತ ಹೆಚ್ಚುವರಿ ಉತ್ಪಾದನೆಯನ್ನು ಬೆಂಬಲಿಸುತ್ತಾ, ಈ ವಿಸ್ತರಣೆಯ ಮೂಲಕ ಪರಿಸರ ರಕ್ಷಣೆ ಮತ್ತು ಉದ್ಯೋಗಾವಕಾಶ ಹೆಚ್ಚುವುದರ ಬಗ್ಗೆ ಕಾರ್ಖಾನೆಯವರು ತಿಳಿಸಿರುತ್ತಾರೆ ಎಂದು ಹೇಳಿದರು. ಆದ್ದರಿಂದ, ಈ ಒಂದು ವಿಸ್ತರಣಾ ಯೋಜನೆಗೆ ನನ್ನ ಸಂಪೂರ್ಣ ಬೆಂಬಲವಿದೆ ಎಂದು ತಿಳಿಸಿದರು.

(3) ಶ್ರೀ ಮಹೇಶ್ ನಾಗಪ್ಪ, ಹರಿಹರ ನಿವಾಸಿ.

ಇವರು ಮಾತನಾಡುತ್ತಾ, ಗ್ರಾಸಿಂ ನವರು ವಿಸ್ತರಣಾ ಯೋಜನೆಯನ್ನು ಮಂಡಿಸಿರುವುದರ ಬಗ್ಗೆ ತಿಳಿದು ನನಗೆ ಸಂತೋಷವಾಗಿದೆ. ಇಂದಿನ ದಿನ, ಬಹಳಷ್ಟು ಕಾರ್ಖಾನೆಗಳು ಮುಚ್ಚಿವೆ. ಗ್ರಾಸಿಂ ಕಾರ್ಖಾನೆ ಬಹಳ ಹಳೆಯ ಕಾರ್ಖಾನೆಯಾದಾಗ್ಯೂ, ವಿಸ್ತರಣೆಯ ಬಗ್ಗೆ ಕೈಗೊಂಡಂತಹ ಕ್ರಮ ಶ್ಲಾಘನೀಯ. ಈ ಒಂದು ಯೋಜನೆಯ ಮೂಲಕ ಪರಿಸರ ರಕ್ಷಣೆ ಮತ್ತು ಉದ್ಯೋಗಾವಕಾಶವನ್ನು ಕಲ್ಪಿಸುವ ಕ್ರಮವನ್ನು ನಾವೆಲ್ಲರೂ ಸ್ವಾಗತಿಸಬೇಕು. ಈ ಯೋಜನೆ ಅಡಿಯಲ್ಲಿ ಸ್ಥಳಿಯ ನಾಗರಿಕರನ್ನು, ರೈತರ ಮಕ್ಕಳನ್ನು ಮತ್ತು ಬಡ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಬೇಕೆಂದು ಗ್ರಾಸಿಂ ಅಧಿಕಾರಿಗಳನ್ನು ವಿನಂತಿಸಿದರು.

(4) ಶ್ರೀ ಹೆಚ್.ಕೆ. ನಾಗಭೂಷಣ, ಗ್ರಾಸಲೀನ್ ಕಾರ್ಮಿಕ ಸಂಘಟಣೆಯ ಅಧ್ಯಕ್ಷ

ಇವರು ಮಾತನಾಡುತ್ತಾ, ಈ ಯೋಜನೆಯ ಅಡಿಯಲ್ಲಿ ಸಾಕಷ್ಟು ಉದ್ಯೋಗಾವಕಾಶಗಳು ಹೆಚ್ಚಲಿದ್ದು, ನಾವೆಲ್ಲರೂ ಈ ಯೋಜನೆಯನ್ನು ಬೆಂಬಲಿಸಬೇಕೆಂದು ಹೇಳಿದರು.

(5) ಈರಣ್ಣ ಹಲಗೇರಿ, ರೈತ ಸಂಘಟಣೆ, ಮಾಕನೂರು.

ಇವರು ಮಾತನಾಡುತ್ತಾ, ಸದರಿ ಕಾರ್ಖಾನೆಯ ಪ್ರಾರಂಭದಲ್ಲಿ ಬಹಳ ಹಿಂದೆ ಅಂದರೆ ಸುಮಾರು 1969 ನೇ ಇಸವಿಯಲ್ಲಿ, ನಲವಾಗಲು, ಕೋಡಿಯಾಲ ಮತ್ತು ಕವಲೆತ್ತು ಗ್ರಾಮಗಳ ನಿವಾಸಿಗಳು, ತಮ್ಮ ಹೊಲ ಮತ್ತು ಮನೆಗಳನ್ನು ಕಳೆದುಕೊಂಡಿರುತ್ತಾರೆ. ಅವರ ಮಕ್ಕಳಿಗೆ ಜೀವನೋಪಾಯಕ್ಕೆ ಯಾವುದೇ ಉದ್ಯೋಗವಿರುವುದಿಲ್ಲ. ಆದ್ದರಿಂದ, ಕಾರ್ಖಾನೆಯವರು ಈ ಗ್ರಾಮಗಳ ಮಕ್ಕಳನ್ನು ಯೋಜನೆಯಡಿಯಲ್ಲಿ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು. ಪ್ರತಿಯೊಬ್ಬರು ಸಭೆಯ ನಿಯಮವನ್ನು ಪಾಲಿಸಬೇಕು, ಶಾಂತತೆಯನ್ನು ಕಾಪಾಡಬೇಕು. ಸ್ಥಳಿಯರಿಗೆ ಮೊದಲ ಆಧ್ಯತೆಯನ್ನು ಕೊಡಬೇಕೆಂದು ಕೇಳುತ್ತಾ ನಾವೆಲ್ಲರೂ ಈ ವಿಸ್ತರಣಾ ಯೋಜನೆಯನ್ನು ಬೆಂಬಲಿಸುತ್ತೇವೆ ಎಂದು ಹೇಳಿದರು.

(6) ಶ್ರೀ ನಿಂಗಪ್ಪ ಹೆಚ್. ಹಳ್ಳಳ್ಳಪ್ಪನವರ್, ನೆಲವಾಗಲು ನಿವಾಸಿ.

ಇವರು ಸಭೆಯಲ್ಲಿ ಮಾತನಾಡುತ್ತಾ, ನಾನೊಬ್ಬ ನಿವೃತ್ತ ಕಾರ್ಮಿಕ. ಕಳೆದ ನಲವತ್ತು ವರ್ಷಗಳಿಂದ ಕಾರ್ಖಾನೆಯಲ್ಲಿ ಕೆಲಸ ಮಾಡಿರುತ್ತೇನೆ. ಇಂದು ನೆಲವಾಗಲು ಗ್ರಾಮ ಜಲ ಮತ್ತು ವಾಯು ಮಾಲಿನ್ಯದಿಂದ ತತ್ತರಿಸಿದೆ. ಆದ್ದರಿಂದ, ನೆಲವಾಗಲು ಗ್ರಾಮವನ್ನು ಕೂಡಲೆ ಸ್ಥಳಾಂತರಿಸಬೇಕೆಂದು ಇದಕ್ಕೆ ಕಂಪನಿಯು ಸಹಕರಿಸಬೇಕೆಂದು ಒತ್ತಾಯಿಸುತ್ತಿದ್ದೇನೆ. ಯೋಜನೆಯ ವಿಸ್ತರಣೆಯ ಬಗ್ಗೆ ಯಾವುದೇ ಅಭ್ಯಂತರವಿಲ್ಲ. ಆದರೆ ಕಾರ್ಖಾನೆಯವರು ಜನರ ಸಮಸ್ಯೆಗಳನ್ನು ಆಲಿಸಬೇಕು. ನೆಲವಾಗಲು ಸ್ಥಳಾಂತರವು ಉದ್ದೇಶಿತ ಯೋಜನೆಯ ವಿಸ್ತರಣೆಯ ಮುಖ್ಯ ಆಧ್ಯತೆ ಆಗಿರಬೇಕು ಎಂದು ಹೇಳಿದರು.

(7) ಶ್ರೀ ಕರಿಯಪ್ಪ ಮಾಳಗೇರ್, ಕೋಡಿಯಾಲ ಹೊಸಪೇಟೆ ನಿವಾಸಿ.

ಇವರು ಸದರಿ ಯೋಜನೆಯನ್ನು ಸ್ವಾಗತಿಸುತ್ತಾ, ನಮ್ಮ ಹಳ್ಳಿಯಲ್ಲಿ ವಿದ್ಯಾಭ್ಯಾಸ, ಉದ್ಯೋಗ ಮತ್ತು ನಾಗರಿಕರ ಜೀವನಮಟ್ಟ ಸಾಕಷ್ಟು ಸುಧಾರಣೆ ಕಂಡುಬಂದಿದೆ. ಉದ್ದೇಶಿತ ವಿಸ್ತರಣಾ ಯೋಜನೆಯಡಿಯಲ್ಲಿ ಸ್ಥಳೀಯ ನಾಗರಿಕರ ಉದ್ಯೋಗಾವಕಾಶಕ್ಕೆ ಮೊದಲ ಆದ್ಯತೆಯನ್ನು ನೀಡಬೇಕು. ಆದ್ದರಿಂದ ನಾವೆಲ್ಲರೂ, ವಿಸ್ತರಣಾ ಯೋಜನೆಯನ್ನು ಬೆಂಬಲಿಸುತ್ತೇವೆ ಎಂದು ಹೇಳಿದರು.

(8) ಶ್ರೀ ನಾಗರಾಜ್ ಹಳ್ಳಳ್ಳಪ್ಪನವರ್, ನೆಲವಾಗಲು ನಿವಾಸಿ.

ಇವರು ಮಾತನಾಡುತ್ತಾ, ಇಂದಿನ ದಿನ, ನಮ್ಮ ಪ್ರಧಾನಿಯವರು ಹೊರದೇಶಗಳಿಗೆ ಹೋಗಿ ನಮ್ಮ ದೇಶದಲ್ಲಿ ಬಂಡವಾಳ ಹೂಡಿಕೆಗಳ ಬಗ್ಗೆ ವಿನಂತಿಸುತ್ತಿದ್ದಾರೆ. ಆದರೇ ಗ್ರಾಸಿಂ ಕಾರ್ಖಾನೆ ಭಾರತೀಯ ಕಂಪನಿಯಾಗಿದ್ದು ಅವರು ನಮ್ಮ ದೇಶದಲ್ಲಿಯೇ ಮತ್ತು ನಮ್ಮ ಹಳ್ಳಿಯಲ್ಲಿ ಬಂಡವಾಳ ಹೂಡಿಕೆಯನ್ನು ಮಾಡುತ್ತಿದ್ದಾರೆ. ಇಂದು ದೇಶದ ಆರ್ಥಿಕ ಸ್ಥಿತಿ ಕೈಗಾರಿಕೆಗಳ ಅಭಿವೃದ್ಧಿಯನ್ನು ಅವಲಂಭಿಸಿದೆ. ಕೈಗಾರಿಕೆ ಅಭಿವೃದ್ಧಿಯಾದಲ್ಲಿ ನಾವೆಲ್ಲರೂ ಅಭಿವೃದ್ಧಿ ಹೊಂದುತ್ತೇವೆ. ನಮ್ಮ ಹಳ್ಳಿಗಳಾದ ನೆಲವಾಗಲು, ಕೋಡಿಯಾಲ, ಕವಲೆತ್ತು, ನದಿಹರಳಹಳ್ಳಿ ಮತ್ತು ಹಿರೇಬಿದರಿ ನಾಗರಿಕರಿಗೆ ಉದ್ಯೋಗಾವಕಾಶ ಗ್ರಾಸಿಂ ಕಾರ್ಖಾನೆಯ ವಿಸ್ತರಣೆಯಿಂದ ಉಂಟಾಗಲಿದೆ. ಆದ್ದರಿಂದ, ನಾವೆಲ್ಲರೂ ಈ ಉದ್ದೇಶಿತ ವಿಸ್ತರಣಾ ಯೋಜನೆಯನ್ನು ಬೆಂಬಲಿಸಬೇಕೆಂದು ಹೇಳಿದರು.

(9) ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮಿಜಿ, ಐರಣಿ, ಹೊಳೆಮಠ.

ಇವರು ಸಭೆಯಲ್ಲಿ ಮಾತನಾಡುತ್ತಾ, ಪರಸ್ಪರ ಪ್ರೀತಿ, ವಿಶ್ವಾಸ, ತಿಳುವಳಿಕೆಯ ಮೂಲಕ ನಾವೆಲ್ಲರೂ ಶಾಂತಿಯನ್ನು ಕಾಪಾಡಬೇಕು ಮತ್ತು ಒಬ್ಬರನೊಬ್ಬರು ಉತ್ತಮ ದಿಶೆಯಲ್ಲಿ ಅರ್ಥಮಾಡಿಕೊಳ್ಳಬೇಕು. ಪರಿಸರ ರಕ್ಷಣೆಯ ಬಗ್ಗೆ ಗ್ರಾಸಿಂ ನವರು ಬಂಡವಾಳ ಹೂಡಿಕೆ ಮಾಡುತ್ತಿರುವುದು ಉತ್ತಮವಾದ ವಿಚಾರವಾಗಿದೆ. ನಾವೆಲ್ಲರೂ ಸಮಾಜ ಮತ್ತು ದೇಶದ ಬೆಳವಣಿಗೆಗೋಸ್ಕರ ಕಂಪನಿಯನ್ನು ಬೆಂಬಲಿಸೋಣ. ಕಾರ್ಖಾನೆಯವರು ಮತ್ತು ನಾಗರಿಕರು ಪರಸ್ಪರ ಮಾತುಕತೆಯ ಮೂಲಕ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು. ಆದಾಗ್ಯೂ ನಾಗರಿಕರು ಈ ಯೋಜನೆಯನ್ನ ಬೆಂಬಲಿಸಬೇಕೆಂದು ಹೇಳಿದರು.

(10) ಶ್ರೀ ಪ್ರಸನ್ನಾನಂದ ಸ್ವಾಮಿಜಿ, ಮಹರ್ಷಿ ವಾಲ್ಮೀಕಿ ಪೀಠ, ರಾಜನಹಳ್ಳಿ.

ಇವರು ಸಭೆಯಲ್ಲಿ ಮಾತನಾಡುತ್ತಾ, ಇಂದು ಭಾರತದಲ್ಲಿ ಜನಸಂಖ್ಯೆ ಹೆಚ್ಚಳ ಒಂದು ದೊಡ್ಡ ಮಾಲಿನ್ಯವಾಗಿದೆ. ಇದರಿಂದಾಗಿ ನಿರುದ್ಯೋಗ ಸಮಸ್ಯೆ ಹೆಚ್ಚುತ್ತಿದೆ. ಆದ್ದರಿಂದ, ಕೈಗಾರಿಕಾಭಿವೃದ್ಧಿ ಅವಶ್ಯಕವಾಗಿದೆ. ಅವರು ಸ್ಥಳೀಯರಿಗೆ ಉದ್ಯೋಗಾವಕಾಶ ನೀಡಬೇಕೆಂದು ಜಿಲ್ಲಾಧಿಕಾರಿಗಳನ್ನು ಮತ್ತು ಗ್ರಾಸಿಂ ಅಧಿಕಾರಿಗಳನ್ನು ಕೋರಿದರು. ಕಾರ್ಖಾನೆಯವರು ವಾಯು, ಜಲ ಮತ್ತು ಪರಿಸರ ರಕ್ಷಣಾ ಕ್ರಮಗಳೊಂದಿಗೆ ವಿಸ್ತರಣೆ ಯೋಜನೆಯನ್ನು ಹಮ್ಮಿಕೊಳ್ಳಬೇಕು. ಆದ್ದರಿಂದ ನಾವೆಲ್ಲರೂ ಈ ಒಂದು ವಿಸ್ತರಣಾ ಯೋಜನೆಯನ್ನು ಬೆಂಬಲಿಸೋಣ ಎಂದು ಹೇಳಿದರು.

(11) ಶ್ರೀ ಮರಿಗೌಡ ಸ್ವಾಮಿಜಿ, ಕೋಡಿಯಾಲ್ ಹೊಸಪೇಟೆ ನಿವಾಸಿ

ಇವರು ಸಭೆಯಲ್ಲಿ ಮಾತನಾಡುತ್ತಾ, ಅವರು ಆದಷ್ಟು ಮಟ್ಟಿಗೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕಂಪನಿಯನ್ನು ವಿನಂತಿಸಿಕೊಂಡರು. ಕಾರ್ಖಾನೆಯ ವಿಸ್ತರಣೆ ನಿರುದ್ಯೋಗ ಸಮಸ್ಯೆಗಳನ್ನು ಬಗೆಹರಿಸುವುದರಿಂದ, ನೆರದಿದ್ದವರೆಲ್ಲರು ಕಂಪನಿಯ ಯೋಜನೆಯನ್ನು ಬೆಂಬಲಿಸಬೇಕೆಂದು ಒತ್ತಾಯಿಸಿದರು.

(12) ಶ್ರೀ ಪುಣ್ಯಕೋಟಿ ಸ್ವಾಮೀಜಿ, ಕೊಡಿಯಾಲ ಹೊಸಪೇಟೆ

ಇವರು ಸಭೆಯಲ್ಲಿ ಮಾತನಾಡುತ್ತಾ, ಅವರು ಯಾವುದೇ ವಿಧ್ಯಾರ್ಹತೆ ಹಿನ್ನೆಲೆ ಇದ್ದರೂ, ಉದ್ಯೋಗಾವಕಾಶಕ್ಕೆ ಸ್ಥಳೀಯ ಯುವಕರನ್ನು ಪರಿಗಣಿಸಬೇಕೆಂದು ಗ್ರಾಸಿಂ ಸಂಸ್ಥೆಗೆ ಸಲಹೆ ನೀಡಿದರು. ಅದಲ್ಲದೇ ವಜಾಮಾಡಿದ 25 ಉದ್ಯೋಗಿಗಳನ್ನು ಪುನ: ನೇಮಕಮಾಡಿಕೊಳ್ಳಬೇಕೆಂದು ಮತ್ತು ಅದರಿಂದ ಅವರ ಕುಟುಂಬಕ್ಕೆ ಸಹಾಯವಾಗುವುದೆಂದು ಮತ್ತು ಅವರು ಕಾರ್ಖಾನೆಯ ಜೊತೆಗೆ ಇರುವರೆಂದು ಅವರು ಒತ್ತಾಯಿಸಿದರು. ಆದಾಗ್ಯೂ, ಸ್ಥಳೀಯ ನಾಗರಿಕರಿಗೆ ಉದ್ಯೋಗ ಕಲ್ಪಿಸಿಕೊಟ್ಟು ಅವರನ್ನು ಸಂತೋಷದಲ್ಲಿ ಇಟ್ಟುಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೆ ಮತ್ತು ಗ್ರಾಸಿಂ ಆಡಳಿತ ಮಂಡಳಿಗೆ ವಿನಂತಿಸಿ ನಾವೆಲ್ಲರೂ ವಿಸ್ತರಣಾ ಯೋಜನೆಯನ್ನು ಬೆಂಬಲಿಸೋಣ ಎಂದು ಸಲಹೆ ನೀಡಿದರು.

(13) ಶ್ರೀ ಕೋಟೆಪ್ಪ ಮ್ಯಾಲಮ್ಮನವರ್, ನೆಲವಗಲು ಹಳ್ಳಿಯ ನಿವಾಸಿ.

ಇವರು ಸಭೆಯಲ್ಲಿ ಮಾತನಾಡುತ್ತಾ, ಕಂಪನಿಯು ನೆಲವಾಗಲು ಹಳ್ಳಿಗೆ ಯಾವ ಸುಧಾರಣೆಯನ್ನು ಮಾಡಲಿಲ್ಲ ಎಂದು ವ್ಯಕ್ತಪಡಿಸಿದರು. ಕಂಪನಿಯು ನಮ್ಮ ಯುವಕರಿಗೆ ಯಾವುದೇ ಕೆಲಸವನ್ನು ನೀಡಲಿಲ್ಲ. ಕಂಪನಿಯು ಮಾಡಿರುವ ಭರವಸೆಗಳ ಪಟ್ಟಿ ಇನ್ನೂ ಬಾಕಿ ಇದೆ. ಕಂಪನಿ ವಿಸ್ತರಣೆ ಮಾಡಲಿ ಅದಕ್ಕೆ ನಮ್ಮ ಆಕ್ಷೇಪಣೆ ಏನೂ ಇಲ್ಲ ಅದರೆ ನಾವು ಕಂಪನಿಯನ್ನು ಮತ್ತು ಜಿಲ್ಲಾಧಿಕಾರಿಗಳನ್ನು ವಿನಂತಿಸಿಕೊಳ್ಳುವುದೇನೆಂದರೆ ನಮ್ಮ ನಿರುದ್ಯೋಗಕ್ಕೆ ಮತ್ತು ಹಳ್ಳಿಯ ಸೌಲಭ್ಯಗಳಿಗೆ ಸಂಬಂದಿಸಿದಂತಹ ಸಮಸ್ಯೆಗಳನ್ನು ಪರಿಹರಿಸಲಿ.

(14) ಶ್ರೀ ನಾಗಪ್ಪ ಬರ್ಕಿ, ಕವಲೆತ್ತು ನಿವಾಸಿ.

ಇವರು ಉದ್ದೇಶಿತ ಯೋಜನೆಯನ್ನು ಸ್ವಾಗತಿಸುತ್ತಾ, ನಾವೆಲ್ಲರೂ ಈ ಯೋಜನೆಯನ್ನು ಬೆಂಬಲಿಸುತ್ತೇವೆ ಆದರೆ ಉದ್ಯೋಗಾವಕಾಶವನ್ನು ಕವಲೆತ್ತು ಹಳ್ಳಿಗೆ ಕೂಡ ಕಲ್ಪಿಸಿಕೊಡಬೇಕೆಂದು ಹೇಳಿದರು. ಇತರೇ ಹಳ್ಳಿಯ ಹಾಗೆ, ನಮ್ಮ ಹಳ್ಳಿಯ ಯುವಕರು ಸಹ ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

(15) ಶ್ರೀ ಚಂದ್ರಶೇಖರ್, ಕೋಡಿಯಾಲ ಹೊಸಪೇಟೆ ನಿವಾಸಿ.

ಇವರು ಸಭೆಯಲ್ಲಿ ಮಾತನಾಡುತ್ತಾ, ನಾವೆಲ್ಲರೂ ಈ ಯೋಜನೆಯನ್ನು ಬೆಂಬಲಿಸುತ್ತೇವೆ ಆದರೆ ಕಂಪನಿಯು ನಮ್ಮ ಹಳ್ಳಿಯ ಸುಮಾರು 40 ಜನ ಕೋಡಿಯಾಲ ನಿರುದ್ಯೋಗಿ ಯುವಕರನ್ನು ತೆಗೆದುಕೊಳ್ಳಬೇಕೆಂದು ಹೇಳಿದರು.

(16) ಶ್ರೀ ವಿಜಯ್ ಕಾಯಿಕಾಡ್, ನೆಲವಾಗಲು ನಿವಾಸಿ.

ಇವರು ಮಾತನಾಡುತ್ತಾ, ನಾವೆಲ್ಲರೂ ಈ ಯೋಜನೆಯನ್ನು ಬೆಂಬಲಿಸುತ್ತೇವೆ ಆದರೆ ಉದ್ಯೋಗವನ್ನು ಸ್ಥಳೀಯ ನಾಗರಿಕರಿಗೆ ಕೊಡಬೇಕೆಂದು ಹೇಳಿದರು.

(17) ಶ್ರೀ ಜಗದೀಶ್ ಸಂಗಣ್ಣವರ್, ಹಿರೇಬಿದರಿ ನಿವಾಸಿ.

ಇವರು ಮಾತನಾಡುತ್ತಾ, ನಾವೆಲ್ಲರೂ ಈ ಯೋಜನೆಯನ್ನು ಬೆಂಬಲಿಸುತ್ತೇವೆ ಮತ್ತು ಉದ್ಯೋಗಾವಕಾಶಕ್ಕೆ ನಮ್ಮ ಹಳ್ಳಿಯ ಯುವಕರನ್ನು ಪರಿಗಣಿಸಬೇಕೆಂದು ಗ್ರಾಸಿಂ ಕಂಪನಿಯನ್ನು ವಿನಂತಿಸಿಕೊಳ್ಳುತ್ತೇನೆ ಎಂದರು.

(18) ಶ್ರೀಮತಿ ಈರಮ್ಮ ಗಾಡಿ, ನೆಲವಾಗಲು ಹಳ್ಳಿಯ ನಿವಾಸಿ ಮತ್ತು ಕೋಡಿಯಾಲ ಗ್ರಾಮ ಪಂಚಾಯತಿ ಸದಸ್ಯೆ.
ನಾವೆಲ್ಲರೂ ಈ ಯೋಜನೆಯನ್ನು ಬೆಂಬಲಿಸುತ್ತೇವೆ ಎಂದು ವ್ಯಕ್ತಪಡಿಸಿದರು.

(19) ಶ್ರೀ ಭೀಮಪ್ಪ ಕುಡುಪಲಿ, ನದಿಹರಳಹಳ್ಳಿ ನಿವಾಸಿ.
ಇವರು ಸಭೆಯಲ್ಲಿ ಮಾತನಾಡುತ್ತಾ, ಗ್ರಾಸಿಮ್ ಕಂಪನಿಯು ಖಂಡಿತವಾಗಿಯೂ ನದಿಹರಳಹಳ್ಳಿ ಮತ್ತು ಹುಲಿಕಟ್ಟಿ ಹಳ್ಳಿಗಳ ಯುವಕರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು. ನಾವೆಲ್ಲರೂ ಈ ವಿಸ್ತರಣಾ ಯೋಜನೆಯನ್ನು ಬೆಂಬಲಿಸುತ್ತೇವೆ.

(20) ಶ್ರೀ ಅರುಣ್ ಕುಂಬಾರ್, ಕೊಡಿಯಾಲ ಹೊಸಪೇಟೆ ನಿವಾಸಿ.
ಇವರು ಮಾತನಾಡುತ್ತಾ, ಇಂದು ಕಾರ್ಖಾನೆಯು ಪ್ರಗತಿ ಹೊಂದಿದರೆ, ಎಲ್ಲರೂ ಮತ್ತು ಎಲ್ಲಾ ಹಳ್ಳಿಗಳು ಪ್ರಗತಿ ಹೊಂದುತ್ತಾರೆ. ಆದರೇ ಗ್ರಾಸಿಂ ಕಂಪನಿಯು ಉದ್ಯೋಗಿಗಳನ್ನು ಪರೀಕ್ಷೆ ಮತ್ತು ಅರ್ಹತೆ ಆಧಾರದ ಮೇಲೆ ತೆಗೆದುಕೊಳ್ಳಬೇಕು. ಅವರು ಕಂಪನಿಯ ಯೋಜನೆಯನ್ನು ಬೆಂಬಲಿಸಿದರು.

(21) ಶ್ರೀಮತಿ ಚಂದ್ರಕಲಾ ಹೆಗ್ಗಪ್ಪನವರ್, ಕೋಡಿಯಾಲ ಹೊಸಪೇಟೆ ನಿವಾಸಿ.
ಇವರು ಮಾತನಾಡುತ್ತಾ, ವಿಸ್ತರಣಾ ಯೋಜನೆಯು ಉದ್ಯೋಗವನ್ನು ಉತ್ಪತ್ತಿ ಮಾಡುತ್ತದೆ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುತ್ತದೆ ಆದ್ದರಿಂದ ಎಲ್ಲರೂ ಈ ಯೋಜನೆಯನ್ನು ಬೆಂಬಲಿಸಬೇಕೆಂದು ವ್ಯಕ್ತಪಡಿಸಿದರು.

(22) ಶ್ರೀ ವಿವೇಕಾನಂದ್ ಸ್ವಾಮಿ, ಹರಿಹರ ನಿವಾಸಿ.
ಇವರು ಸಭೆಯಲ್ಲಿ ಮಾತನಾಡುತ್ತಾ, ಗ್ರಾಸಿಂ ಕಂಪನಿಯು ತನ್ನ ಯೋಜನೆಯ ವಿಸ್ತರಣೆಗೆ ತೆಗೆದುಕೊಂಡ ನಿರ್ಧಾರವನ್ನು ಸ್ವಾಗತಿಸಿದರು. ಮೈಸೂರು ಕಿರ್ಲೋಸ್ಕರ್ ಕಾರ್ಖಾನೆಯು ಮುಚ್ಚಿರುವುದರಿಂದ ಹರಿಹರ ಇಂದು ತುಂಬಾ ಗಹನವಾದ ತೊಂದರೆಯಲ್ಲಿದೆ ಮತ್ತು ಜನರು ಗ್ರಾಸಿಂ ಸಂಸ್ಥೆಯನ್ನು ಬೆಂಬಲಿಸಬೇಕು ಮತ್ತು ಉದ್ಯೋಗಾವಕಾಶಕ್ಕೆ ಸ್ಥಳೀಯ ನಾಗರಿಕರಿನ್ನು ಪರಿಗಣಿಸಬೇಕೆಂದು ಗ್ರಾಸಿಂ ಆಡಳಿತ ಮಂಡಳಿಯನ್ನು ಮತ್ತು ಜಿಲ್ಲಾಧಿಕಾರಿಗಳನ್ನು ವಿನಂತಿಸಿಕೊಂಡರು.

(23) ಶ್ರೀ ಪರಮೇಶಿ ಚಿನ್ನನ್ನನವರ್, ನೆಲವಾಗಲು ನಿವಾಸಿ.
ಇವರು ಮಾತನಾಡುತ್ತಾ, ಗ್ರಾಸಿಂ ಸಂಸ್ಥೆಯು ನೆಲವಾಗಲು ಹಳ್ಳಿಯನ್ನು ಸ್ಥಳಾಂತರಿಸಿದರೆ ಮಾತ್ರ ಈ ಯೋಜನೆಯನ್ನು ವಿಸ್ತರಣ ಮಾಡಲು ಅನುಮತಿ ನೀಡುತ್ತೇವೆ ಎಂದರು.

(24) ಶ್ರೀ ಕೊಟ್ರಪ್ಪ ಮೆಗಲಗೆರೆ, ವಡೇರಾಯನಹಳ್ಳಿ ನಿವಾಸಿ.
ಇವರು ಸಭೆಯಲ್ಲಿ ಮಾತನಾಡುತ್ತಾ, ನಮ್ಮ ಹಳ್ಳಿಯಲ್ಲಿ ತುಂಬಾ ಜನರು ಗ್ರಾಸಿಂ ಸಂಸ್ಥೆಯನ್ನು ಅವಲಂಭಿಸಿರುತ್ತಾರೆ. ನಮ್ಮ ಹಳ್ಳಿಯಲ್ಲಿ ತುಂಬಾ ಜನರು ಗ್ರಾಸಿಂ ಕಂಪನಿಯಿಂದ ಲಾಭ ಪಡೆದಿದ್ದಾರೆ. ನಾವು ಯಾವಾಗಲೂ ಯಾವುದೇ ಬೇಡಿಕೆಯಿಲ್ಲದೆ ಗ್ರಾಸಿಂ ಸಂಸ್ಥೆಯನ್ನು ಬೆಂಬಲಿಸುತ್ತೇವೆ ಎಂದರು.

(25) ಶ್ರೀ ಶಿವಮೂರ್ತಿ ಚನ್ನಗೌಡರ್, ನೆಲವಾಗಲು ಹಳ್ಳಿಯ ನಿವಾಸಿ.
ಇವರು ಸಭೆಯಲ್ಲಿ ಮಾತನಾಡುತ್ತಾ, ಕಂಪನಿಯು ನೆಲವಾಗಲು ಹಳ್ಳಿಗೆ ತುಂಬಾ ಅನ್ಯಾಯ ಮಾಡಿದೆ. ಅವರು ಹಳ್ಳಿಯನ್ನು ಇನ್ನೂ ಸ್ಥಳಾಂತರಿಸಲಿಲ್ಲ. ಹಿಂದಿನ ಸಲ ಅವರು ಉದ್ಯೋಗವನ್ನು ಕೊಡುವಾಗ ನೆಲವಾಗಲು ಹಳ್ಳಿಯನ್ನು ಬಿಟ್ಟು ಬೇರೆ ಹಳ್ಳಿಗಳನ್ನು ಪರಿಗಣಿಸಿದೆ. ನಾವು ಇದನ್ನು ಸಹಿಸುವುದಿಲ್ಲ. ಉದ್ಯೋಗಾವಕಾಶವನ್ನು ಕೊಡುವಾಗ, ಗ್ರಾಸಿಂ ಸಂಸ್ಥೆಯು ಖಂಡಿತವಾಗಿ ನೆಲವಾಗಲು ಹಳ್ಳಿಯ ನಾಗರಿಕರನ್ನು ತೆಗೆದುಕೊಳ್ಳಬೇಕೆಂದು ನಾವು ನಿರಂತರವಾಗಿ ಒತ್ತಾಯಿಸುತ್ತೇವೆ ಎಂದರು.

(26) ಶ್ರೀ ರೇವಣಸಿದ್ದಪ್ಪ, ಹರಿಹರ ನಿವಾಸಿ.

ಇವರು ಸಭೆಯಲ್ಲಿ ಮಾತನಾಡುತ್ತಾ, ಗ್ರಾಸಿಂ ಕಾರ್ಖಾನೆಯು ಉದ್ಯೋಗಾವಕಾಶಕ್ಕೆ ಸ್ಥಳೀಯ ಜನರನ್ನು ಪರಿಗಣಿಸಬೇಕೆಂದು ಇಲ್ಲಿ ನೆರದಿರುವ ಬಹುತೇಕ ಜನರು ಒತ್ತಾಯಿಸುತ್ತಿದ್ದಾರೆ. ಅವರೂ ಕೂಡ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡುವಾಗ ಸ್ಥಳೀಯ ನಾಗರಿಕರಿಗೆ ಆಧ್ಯತೆ ಕೊಡಬೇಕೆಂದು ಗ್ರಾಸಿಂ ಆಡಳಿತ ಮಂಡಳಿಯನ್ನು ವಿನಂತಿಸಿಕೊಂಡರು. ಇಂದು ಹರಿಹರದಲ್ಲಿ ಮತ್ತು ಸುತ್ತಮುತ್ತಲಲ್ಲಿ ಎಲ್ಲೂ ಕಾರ್ಖಾನೆಗಳು ಇಲ್ಲ ಆದ್ದರಿಂದ ನಾವೆಲ್ಲರೂ ಖಂಡಿತವಾಗಿ ಗ್ರಾಸಿಂ ಸಂಸ್ಥೆಯ ವಿಸ್ತರಣಾ ಯೋಜನೆಯನ್ನು ಬೆಂಬಲಿಸಬೇಕು ಎಂದರು.

(27) ಶ್ರೀ ಸೇಡಿಯಪ್ಪ, ಕವಲೆತ್ತು ನಿವಾಸಿ.

ಇವರು ಮಾತನಾಡುತ್ತಾ, ನಾವೆಲ್ಲರೂ ಗ್ರಾಸಿಂ ಕಂಪನಿಯ ವಿಸ್ತರಣೆಯನ್ನು ಬೆಂಬಲಿಸುತ್ತೇವೆ ಏಕೆಂದರೆ ಗ್ರಾಸಿಂ ಕಂಪನಿಯು ಯಾವಾಗಲೂ ನಮಗೆ ಬೆಂಬಲ ನೀಡಿದೆ ಎಂದರು.

(28) ಶ್ರೀಮತಿ ಶೀಲ ಬಿ.ಕುರುಬರ್, ನೆಲವಾಗಲು ಹಳ್ಳಿಯ ನಿವಾಸಿ.

ಇವರು ಸಭೆಯಲ್ಲಿ ಮಾತನಾಡುತ್ತಾ, ಸುತ್ತಮುತ್ತಲಿನ ಹಳ್ಳಿಗಳಾದ ನೆಲವಾಗಲು, ಕವಲೆತ್ತು, ಕೋಡಿಯಾಲ, ನದಿಹರಳಹಳ್ಳಿಯ ಎಲ್ಲರಿಗೂ ಗ್ರಾಸಿಂ ಸಂಸ್ಥೆಯಿಂದ ಉತ್ತಮ ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗ ಸೌಲಭ್ಯಗಳು ಸಿಕ್ಕಿದೆ. ವಿಸ್ತರಣೆ ಯೋಜನೆಯಡಿಯಲ್ಲಿ ಉದ್ಯೋಗಾವಕಾಶಕ್ಕೆ ಸ್ಥಳೀಯ ನಾಗರಿಕರನ್ನು ಪರಿಗಣಿಸಬೇಕೆಂದು ಗ್ರಾಸಿಂ ಆಡಳಿತ ಮಂಡಳಿಯನ್ನು ಕೋರಿಕೊಂಡರು. ಈ ಯೋಜನೆಯನ್ನು ಅವರು ಬೆಂಬಲಿಸಿದರು.

ಸಭೆಯ ಕೊನೆಯಲ್ಲಿ ಜಿಲ್ಲಾಧಿಕಾರಿಗಳು ಮಾತನಾಡುತ್ತ ಸುತ್ತಮುತ್ತಲಿನ ಪ್ರದೇಶದ ಬಹುತೇಕ ಜನರಿಗೆ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಲು ನಾವು ಅವಕಾಶ ಕೊಟ್ಟಿದ್ದೇವೆ ಎಂದು ಹೇಳಿದರು. ನಾವು ಜನರು ಕೊಟ್ಟ ಅಭಿಪ್ರಾಯವನ್ನು ತೆಗೆದುಕೊಂಡಿದ್ದೇವೆ. ಆದಾಗ್ಯೂ ಈ ವಿಸ್ತರಣಾ ಯೋಜನೆಯ ಬಗ್ಗೆ, ಯಾವುದೇ ನಾಗರಿಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಇಚ್ಛೆಪಡುವುದಾದರೆ, ಅಂತಹವರು ತಮ್ಮ ಅಭಿಪ್ರಾಯವನ್ನು ಇಂದು ವೇಳೆ 5:00 ಘಂಟೆಯ ಒಳಗೆ, ಲಿಖಿತ ರೂಪದಲ್ಲಿ ತಹಶೀಲ್ದಾರ್ ಕಛೇರಿಗೆ ಅಥವಾ ಜಿಲ್ಲಾಧಿಕಾರಿಗಳ ಕಛೇರಿಗೆ ಸಲ್ಲಿಸಬಹುದೆಂದು ವಿನಂತಿಸಿಕೊಂಡರು.

ಮುಂದುವರೆದು, ಸಭೆಯ ನಡಾವಳಿಯೊಂದಿಗೆ ವಿಡಿಯೋ ಸಿಡಿ, ಛಾಯಾ ಚಿತ್ರಗಳನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ರವರ ಮುಖಾಂತರ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ರವಾನಿಸುವುದಾಗಿ ತಿಳಿಸಿದರು.

ಸಭೆಗೆ ಆಗಮಿಸಿದ್ದ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಡಾ. ಎಂ.ವಿ. ವೆಂಕಟೇಶ್,** ಭಾ.ಆ.ಸೇ.
ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,
ಪರಿಸರ ಸಾರ್ವಜನಿಕ ಸಭೆ, ಹಾವೇರಿ ಜಿಲ್ಲೆ.